ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**<u>ಸಿ.ಸಿ. ಸಂಖ್ಯೆ: 78/2025</u>**

ಪ್ರ.ವ.ಬೋ.ತಾಃ 18-10-2025

ಚಾಸಾಃ 3 ಫ್ರಾಸಾಃ 2

| | |
|---|---|
| ಸಾಕ್ಷಿಯ ಹೆಸರು | ಫಾತಿಮಾಬಿ |
| ತಂದೆ/ಗಂಡನ ಹೆಸರು | ಕರೀಂ ಸಾಬ್ |
| ವಯಸ್ಸು | 57 ವರ್ಷ |
| ವೃತ್ತಿ | ಮನೆ ಕೆಲಸ |
| ವಾಸ | ಮಧುಗಿರಿ ಟೌನ್, ಮಧುಗಿರಿ ತಾ. |

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-</u>**

ಆರೋಪಿಯನ್ನು ನೋಡಿರುತ್ತೇನೆ. ಚಾ.ಸ.1 ನನ್ನ ಗಂಡ, ಚಾಸಾ.4 ನನ್ನ ಮಗಳು, ಚಾಸಾ.2 ರವರು ನಮ್ಮ ಮನೆಯಲ್ಲಿ ವಾಸವಾಗಿರುತ್ತಾರೆ. ಕಳೆದ ಆರೂವರೆ ತಿಂಗಳ ಹಿಂದೆ ಚಾಸಾ.1 ರವರು ಶಿರಾಗೆ ಮದುವೆ ಹೋಗಿದ್ದರು, ಚಾಸಾ.2 ರವರು ಸಹ ತಮ್ಮ ಸಂಬಂಧಿಕರ ಮದುವೆಗೆ ಹೋಗಿದ್ದರು. ನಾನು ನನ್ನ ಮಗಳಾದ ಚಾಸಾ.4 ರವರು ಮನೆಗೆ ಹೋಗಿದ್ದೆನು. ಆ ಸಮಯದಲ್ಲಿ ರಾತ್ರಿ ಸಮಯದಲ್ಲಿ ಯಾರೋ ನಮ್ಮ ಮತ್ತು ಚಾಸಾ.2 ರವರು ಮನೆಯಲ್ಲಿ ಕಳ್ಳತನ ಮಾಡಿದ್ದರು. ಆ ಸಮಯದಲ್ಲಿ ನಮ್ಮ ಮನೆಯಲ್ಲಿ ಎರಡು ಬಂಗಾರದ ಉಂಗುರ, ಒಂದು ಜೊತೆ ಬಂಗಾರದ ಹ್ಯಾಂಗಿಂಗ್ಸ್ ಮತ್ತು ಒಂದು ಬಂಗಾರದ ಚೈನನ್ನು ಕಳ್ಳತನ ಮಾಡಿದ್ದರು. ಚಾಸಾ.2 ರವರು ಮನೆಯಲ್ಲಿ ಒಂದು ಬಂಗಾರದ ಉಂಗುವನ್ನು ಕಳ್ಳತನ

ಮಾಡಿದ್ದರು. ಈ ವಿಚಾರವನ್ನು ಚಾಸಾ.1 ರವರು ನನಗೆ ಫೋನ್ ಮೂಲಕ ತಿಳಿಸಿದರು. ತಕ್ಷಣ ನಾನು ಮತ್ತು ಚಾಸಾ.4 ರವರು ಹೋಗಿ ನೋಡಲಾಗಿ ಎಲ್ಲಾ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ನಮ್ಮ ಮನೆಯ ಬೀರುಗಳನ್ನು ಹೊಡೆದುಹಾಕಿದ್ದರು. ಈ ಬಗ್ಗೆ ಚಾಸಾ.1 ರವರು ದೂರು ನೀಡಿರುತ್ತಾರೆ. ಈ ಬಗ್ಗೆ ಪೊಲೀಸರು ನನ್ನ ಹೇಳಿಕೆ ಮತ್ತು ಮರು ಹೇಳಿಕೆ ಪಡೆದರು. ಆ ದಿನ ನಮ್ಮ ಮನೆಯಲ್ಲಿ ಕಳ್ಳತನವಾದ ಆಭರಣಗಳನ್ನು ನಿಪಿ.11 ರಂತಹ ಫೋಟೋದಲ್ಲಿ ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ– ಆರೋಪಿತರ ಪರವಾಗಿ ಶ್ರೀ. ಎಂ.ಎಂ. ವಕೀಲರಿಂದಃ–**

ಆ ಹೇಳಿಕೆ ಮತ್ತು ಮರು ಹೇಳಿಕೆಯಲ್ಲಿ ಬರೆದಿರುವ ವಿಚಾರವನ್ನು ನನಗೆ ಕನ್ನಡ ಓದಲು ಮತ್ತು ಬರೆಯಲು ಬರದೇ ಇರುವ ಕಾರಣ ಓದಿ ತಿಳಿದುಕೊಂಡಿರುವುದಿಲ್ಲ. ಆ ದಾಖಲೆಗಳಿಗೆ ಪೊಲೀಸರು ಸಹಿ ಮಾಡು ಎಂದ ಕಾರಣ ಸಹಿ ಮಾಡಿರುತ್ತೇನೆ. ಆ ಒಡವೆಗಳು ನಮಗೆ ಸೇರಿದ್ದವು ಎಂಬ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆ ಒಡವೆಗಳನ್ನು ಯಾರು ಕಳ್ಳತನ ಮಾಡಿದರು ಎಂಬುದನ್ನು ನಾನು ನೋಡಿರುವುದಿಲ್ಲ.

**ಮರು ವಿಚಾರಣೆಃ– ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ